## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1052
2. ಮಾನ್ಯ ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು)
3. ಉತ್ತರಿಸಬೇಕಾದ ದಿನಾಂಕ : 16.12.2025
4. ಉತ್ತರಿಸುವ ಸಚಿವರು : ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರ ರೈತರಿಗೆ ನಿಗದಿಪಡಿಸಿರುವ ಕಬ್ಬಿನದರ ಒಂದು ಟನ್ನಿಗೆ ಎಷ್ಟು; ಕೇಂದ್ರ ಸರ್ಕಾರ ರೈತರ ಕಬ್ಬಿಗೆ ಎಫ್.ಆರ್.ಪಿ ಗೆ ಅನುಗುಣವಾಗಿ ನಿಗದಿಪಡಿಸಿರುವ ದರ ಎಷ್ಟು; | ಕಬ್ಬಿಗೆ ರಾಜ್ಯ ಸರ್ಕಾರವು ಯಾವುದೇ ದರ ನಿಗದಿಪಡಿಸಿರುವುದಿಲ್ಲ. ಸದರಿ ವಿಷಯವು ಕೇಂದ್ರ ಸರ್ಕಾರದ ವ್ಯಾಪ್ತಿಗೆ ಬರುತ್ತಿದೆ.<br>2025-26ನೇ ಸಕ್ಕರೆ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳು ರೈತರ ಕಬ್ಬಿಗೆ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಪತ್ರ ಸಂಖ್ಯೆ: No.3(1)/2024-SP-I, Dated:06.05.2025 ರಲ್ಲಿ ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.<br>1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.355.00<br>2. ಶೇಕಡ 10.25 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ರೂ.3.46 ರಂತೆ ಹೆಚ್ಚುವರಿ ಬೆಲೆ.<br>3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 0.1 ರಷ್ಟು ಇಳುವರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.3.46ರ ಪ್ರಮಾಣಾನುಗುಣವಾಗಿ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು.<br>4. ಶೇಕಡ 9.50 ಅಥವಾ 9.50ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಕ್ವಿಂಟಾಲ್ ಕಬ್ಬಿಗೆ ಕನಿಷ್ಠ ರೂ.329.05 ಗಳ ನ್ಯಾಯಯುತ ಮತ್ತು ಲಾಭದಾಯಕ ಬೆಲೆ.<br>ಮೇಲ್ಕಂಡಂತೆ, ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ನಿಗದಿಪಡಿಸಿರುವ ಎಫ್.ಆರ್.ಪಿ. ಮಾರ್ಗಸೂಚಿ ದರಗಳನ್ನು ಮತ್ತು ರಾಜ್ಯದ ಸಕ್ಕರೆ ಕಾರ್ಖಾನೆಗಳಲ್ಲಿ 2024-25ನೇ ಹಂಗಾಮಿನಲ್ಲಿ ಲಭ್ಯವಾದ ಸಕ್ಕರೆ ಇಳುವರಿಯನ್ನು ಆಧರಿಸಿ 2025-26ನೇ ಹಂಗಾಮಿನಲ್ಲಿ ರಾಜ್ಯದ ಪ್ರತಿಯೊಂದು ಸಕ್ಕರೆ ಕಾರ್ಖಾನೆಗಳು ರೈತರಿಗೆ ಪಾವತಿಸಬೇಕಾದ ಕಬ್ಬಿನ ಬೆಲೆಯ ಕುರಿತು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಆದೇಶ ಸಂಖ್ಯೆ: ಡಿಎಸ್‌ಕೆ/ಎಸ್‌ಟಿಟಿ/01/2025-26, ದಿನಾಂಕ: 15.09.2025ರಲ್ಲಿ ಆದೇಶಿಸಲಾಗಿತ್ತು. ಆದೇಶದ ಪ್ರತಿಯನ್ನು **ಅನುಬಂಧ-1 ರಲ್ಲಿ** ಒದಗಿಸಿದೆ. |
| (ಆ) | ಕೇಂದ್ರ ಸರ್ಕಾರದ ಎಫ್. ಆರ್.ಪಿ ಪ್ರಕಾರ ಕಬ್ಬು ಕಟಾವು ಸಾಗಟ ವೆಚ್ಚ ಸೇರಿ ಒಂದು ಟನ್ ಕಬ್ಬಿನ ಬೆಲೆ ಎಷ್ಟು; ಕೇಂದ್ರದ ಎಫ್.ಆರ್.ಪಿ ದರಕ್ಕಿಂತ ರಾಜ್ಯ ಸರ್ಕಾರ ಎಷ್ಟು ಹೆಚ್ಚಿನ ದರವನ್ನು ನಿಗದಿಪಡಿಸಿದೆ; | ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯ ಪತ್ರ ಸಂಖ್ಯೆ:No.3(1)/2024-SP-I, Dated:06.05.2025 ರಲ್ಲಿ ನಿಗದಿಪಡಿಸಿರುವ ಎಫ್.ಆರ್.ಪಿ ಮಾನದಂಡಗಳನುಸಾರ, ಕಬ್ಬು ಕಟಾವು ಹಾಗೂ ಸಾಗಾಣಿಕೆ ವೆಚ್ಚ ಸೇರಿದಂತೆ, ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಹೊಂದಿರುವ ಪ್ರತಿ ಮೆ.ಟನ್ ಕಬ್ಬಿಗೆ ರೂ.3550.00 ಗಳ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಾಗುತ್ತದೆ ಹಾಗೂ ಶೇಕಡ 9.50 ಅಥವಾ 9.50ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆ.ಟನ್ ಕಬ್ಬಿಗೆ ಕನಿಷ್ಠ ರೂ.3290.50 ಗಳ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯಾಗುತ್ತದೆ. |

ದಿನಾಂಕ:07.11.2025ರಂದು ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳ ಮಾಲೀಕರು / ಪ್ರತಿನಿಧಿಗಳೊಂದಿಗೆ ಮತ್ತು ರಾಜ್ಯದ ಕಬ್ಬು ಬೆಳೆಗಾರರು ಹಾಗೂ ರೈತ ಸಂಘಟನೆಗಳ ಮುಖಂಡರು ಮತ್ತು ಪ್ರತಿನಿಧಿಗಳೊಂದಿಗೆ ಸುಧೀರ್ಘವಾಗಿ ಸಭೆಯನ್ನು ಜರುಗಿಸಲಾಗಿರುತ್ತದೆ. ಸದರಿ ಸಭೆಯಲ್ಲಿ ನಿರ್ಣಯಿಸಿರುವಂತೆ, 2025-26ನೇ ಹಂಗಾಮಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ಸಂಬಂಧಿಸಿದ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ಕನಿಷ್ಠ ಹೆಚ್ಚುವರಿ ಕಬ್ಬು ಬೆಲೆಯನ್ನು ಸರ್ಕಾರದ ಆದೇಶ ಸಂಖ್ಯೆ: ಸಿಐ 324 ಎಸ್‌ಜಿಎಫ್ 2025, ದಿನಾಂಕ:08.11.2025ರಲ್ಲಿ ನಿಗದಿಪಡಿಸಲಾಗಿದ್ದು ಸದರಿ ಆದೇಶದಲ್ಲಿನ ಮಾರ್ಗಸೂಚಿಗಳ ಪ್ರಕಾರ ಕಬ್ಬಿನ ಬೆಲೆಯು ಈ ಕೆಳಕಂಡಂತೆ ಇರುತ್ತದೆ.

| ಇಳುವರಿ | ಎಫ್.ಆರ್.ಪಿ (ಪ್ರತಿ ಮೆ.ಟನ್) (ಕಬ್ಬು ಕಟಾವು ಮತ್ತು ಸಾಗಾಣಿಕ ವೆಚ್ಚವನ್ನು ಒಳಗೊಂಡಂತೆ) (ರೂ.ಗಳಲ್ಲಿ) | ಸಕ್ಕರೆ ಕಾರ್ಖಾನೆಗಳು ಮೊದಲಿನ ಕಂತಿನಲ್ಲಿ ರೈತರಿಗೆ ನೀಡಲು ಒಪ್ಪಿರುವ ಮೊತ್ತ ರೂ.ಗಳಲ್ಲಿ (ಪ್ರತಿ ಮೆ.ಟನ್ ಗೆ) (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ ) | ಎರಡನೇ ಕಂತಿನಲ್ಲಿ ಪಾವತಿಸಬೇಕಾದ ಮೊತ್ತ (ರೂ.ಗಳಲ್ಲಿ) | | | ಒಟ್ಟು ಮೊತ್ತ (ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚವನ್ನು ಹೊರತುಪಡಿಸಿ) (ರೂ.ಗಳಲ್ಲಿ) |
|---|---|---|---|---|---|---|
| | | | ಸಕ್ಕರೆ ಕಾರ್ಖಾನೆಗಳು | ರಾಜ್ಯ ಸರ್ಕಾರ | ಒಟ್ಟು | |
| 1 | 2 | 3 | 4 | 5 | 6 | 7 (3+6) |
| 9.5% ಅಥವಾ ಕಡಿಮೆ | 3290.5 | ಕೇಂದ್ರ ಸರ್ಕಾರದ ಎಫ್.ಆರ್.ಪಿ ದರದನ್ವಯ ರೈತರಿಗೆ ನೀಡಲು ಒಪ್ಪಿರುವ ಮೊತ್ತ | 50 | 50 | 100 | ಕಾಲಂ 3 ರಲ್ಲಿನ ಮೊತ್ತಕ್ಕೆ ಎರಡನೇ ಕಂತಿನ ರೂ.100.00 ಗಳನ್ನು ಸೇರಿಸಿ ರೈತರಿಗೆ ನೀಡಬೇಕಾದ ಮೊತ್ತ |
| 10.25% | 3550 | 3100 | 50 | 50 | 100 | 3200.00 |
| 11.25% | 3896 | 3200 | 50 | 50 | 100 | 3300.00 |

*10.25 - 9.5 % ಸಕ್ಕರೆ ಇಳುವರಿ ಪ್ರಮಾಣ ನಡುವೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.3.46 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

* 11.25 - 10.25 % ಸಕ್ಕರೆ ಇಳುವರಿ ಪ್ರಮಾಣದ ನಡುವೆ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ ಪ್ರತಿ 0.1 % ಕಡಿಮೆ ಸಕ್ಕರೆ ಇಳುವರಿಗೆ ಅನುಪಾತಕ್ಕೆ ಅನುಗುಣವಾಗಿ ರೂ.1.00 ಮೊತ್ತವನ್ನು ಪ್ರತಿ ಕ್ವಿಂಟಾಲ್‌ಗೆ ಪರಿಗಣಿಸುವುದು.

ಕಾರ್ಖಾನೆಗಳು ಪ್ರಥಮ ಕಂತಿನ ಮೊತ್ತವನ್ನು ಕಬ್ಬು (ನಿಯಂತ್ರಣ) ಕಾಯ್ದೆಯಡಿಯಲ್ಲಿ ನಿಗದಿಪಡಿಸಿರುವಂತೆ 14 ದಿನಗಳಲ್ಲಿ ಹಣವನ್ನು ರೈತರಿಗೆ ಸಂದಾಯ ಮಾಡತಕ್ಕದ್ದು ಎಂದು ಆದೇಶಿಸಲಾಗಿರುತ್ತದೆ. ಸದರಿ ಸರ್ಕಾರದ ಆದೇಶವನ್ನು ರಾಜ್ಯದ ಎಲ್ಲಾ ಸಕ್ಕರೆ ಕಾರ್ಖಾನೆಗಳು ಪಾಲಿಸಲು ಸೂಚಿಸಲಾಗಿದೆ.

| | | |
|---|---|---|
| (ಇ) | ಕಬ್ಬಿನ ಬೆಲೆಗೆ ಸಂಬಂಧಪಟ್ಟಂತೆ ಎಫ್. ಆರ್.ಪಿ ಮತ್ತು ಎಂ.ಎಸ್. ಪಿ ನಿಗದಿಪಡಿಸುವುದು ರಾಜ್ಯ ಸರ್ಕಾರವೇ ಅಥವಾ ಕೇಂದ್ರ | ಕೇಂದ್ರ ಕೃಷಿ ಬೆಲೆ ಮತ್ತು ವೆಚ್ಚ ಆಯೋಗವು (ಸಿ.ಎ.ಸಿ.ಪಿ) ಮಾಡುವ ಶಿಫಾರಸ್ಸುಗಳನ್ನು ಆಧರಿಸಿ, ಕಬ್ಬು (ನಿಯಂತ್ರಣ) ಆದೇಶ 1966 ರ ಖಂಡ 3(1) ರನ್ವಯ ಭಾರತ ಸರ್ಕಾರದ ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆಯು ಮುಂಬರುವ ಸಕ್ಕರೆ ಹಂಗಾಮಿನಲ್ಲಿ ರೈತರು ಸರಬರಾಜು ಮಾಡುವ ಕಬ್ಬಿಗೆ ಸಕ್ಕರೆ ಕಾರ್ಖಾನೆಗಳು ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ (ಎಫ್.ಆರ್.ಪಿ) ಕುರಿತು ಮಾರ್ಗಸೂಚಿ |

| | | |
|---|---|---|
| | ಸರ್ಕಾರವೇ, ಸಕ್ಕರೆಯ ಆಮದು ಮತ್ತು ರಫ್ತು ನಿಯಂತ್ರಣ ಯಾರ ಕೈಯಲ್ಲಿ ಇರುತ್ತದೆ; | ದರಗಳನ್ನು ನಿಗದಿಪಡಿಸುತ್ತದೆ. ಸದರಿ ಮಾರ್ಗಸೂಚಿಗಳು ದೇಶಾದ್ಯಂತ ಏಕರೂಪವಾಗಿದ್ದು ಇಡೀ ದೇಶಕ್ಕೆ ಅನ್ವಯಿಸುತ್ತವೆ. ಕಬ್ಬಿಗೆ ಕನಿಷ್ಟ ಮಾರಾಟ ದರವನ್ನು (ಎಂ.ಎಸ್.ಪಿ) ನಿಗದಿಪಡಿಸುವ ಪದ್ಧತಿ ಇರುವುದಿಲ್ಲ.<br>ಅದೇ ರೀತಿ, Sugar Price (Control) Order 2018 ರ ಖಂಡ 3 ರನ್ವಯ ಕೇಂದ್ರ ಸರ್ಕಾರವು ಸಕ್ಕರೆಗೆ ಕನಿಷ್ಟ ಮಾರಾಟ ದರವನ್ನು (ಎಂ.ಎಸ್.ಪಿ) ನಿಗದಿಪಡಿಸುವ ಸಕ್ಷಮ ಪ್ರಾಧಿಕಾರವಾಗಿರುತ್ತದೆ. ಸಕ್ಕರೆಯ ಅಮದು ಮತ್ತು ರಫ್ತಿನ ನಿಯಂತ್ರಣವು ಪೂರ್ಣವಾಗಿ ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಒಳಪಟ್ಟಿರುತ್ತದೆ. |
| (ಈ) | ಕಬ್ಬಿನ ಕೊಳ್ಳುವಿಕೆ ದರ ನಿಗದಿಪಡಿಸಲು ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ರಾಜ್ಯದ ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುವರೇ; ಪತ್ರ ಬರೆದಿದ್ದಲ್ಲಿ ಸದರಿ ಪತ್ರಕ್ಕೆ ಪ್ರಧಾನ ಮಂತ್ರಿಗಳಿಂದ ಉತ್ತರ ಬಂದಿರುತ್ತದೆಯೇ; ರಾಜ್ಯದ ಕಬ್ಬು ಬೆಳೆಗಾರರಿಗೆ ನ್ಯಾಯಯುತ ಬೆಲೆಯನ್ನು ನೀಡಲು ಕೇಂದ್ರ ಸರ್ಕಾರ ಮುಖ್ಯಮಂತ್ರಿಗಳ ಪತ್ರದ ಮೇಲೆ ತೀರ್ಮಾನ ತೆಗೆದುಕೊಂಡಿದೆಯೇ? | ಕಬ್ಬಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (ಎಫ್.ಆರ್.ಪಿ) ಹೆಚ್ಚಿಸುವುದು, ಕಬ್ಬಿಗೆ ಬೆಲೆ ನಿಗದಿಗೊಳಿಸುವಾಗ ಸರಾಸರಿ ಇಳುವರಿಯನ್ನು ಶೇ.9.5 ಗಳೆಂದು ಪರಿಗಣಿಸುವುದು ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ ದರವನ್ನು Ex-Gate ಬದಲಾಗಿ Ex-Field ದರವೆಂದು ಪರಿಗಣಿಸುವುದು ಸೇರಿದಂತೆ ಕಬ್ಬು ಬೆಳೆಗಾರ ರೈತರ ಇನ್ನಿತರ ಬೇಡಿಕೆಗಳ ಬಗ್ಗೆ, ಹಾಗೂ ಸಕ್ಕರೆ ಕಾರ್ಖಾನೆಗಳ ಪ್ರಮುಖ ಬೇಡಿಕೆಗಳಾದ ಸಕ್ಕರೆಯ ಕನಿಷ್ಟ ಮಾರಾಟ ದರವನ್ನು (ಎಂ.ಎಸ್.ಪಿ) ಹೆಚ್ಚಿಸುವುದು, ಎಥನಾಲ್ ದರ ಪರಿಷ್ಕರಣೆ ಮತ್ತು ಹಂಚಿಕೆ ಪ್ರಮಾಣವನ್ನು ಹೆಚ್ಚಿಸುವುದು ಸೇರಿದಂತೆ ಸಕ್ಕರೆ ಕಾರ್ಖಾನೆಗಳ ಇತ್ಯಾದಿ ಬೇಡಿಕೆಗಳ ಬಗ್ಗೆ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:06.11.2025, 08.11.2025 ಮತ್ತು 21.11.2025ರಂದು ಸನ್ಮಾನ್ಯ ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿರುತ್ತಾರೆ. ಇದಕ್ಕೆ ಪ್ರತಿಯಾಗಿ ಮಾನ್ಯ ಕೇಂದ್ರ ಗ್ರಾಹಕರ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣಾ ಇಲಾಖೆ ಸಚಿವರು ದಿನಾಂಕ:07.12.2025, 12.12.2025ರಂದು ಮಾನ್ಯ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿರುತ್ತಾರೆ.<br>ಅಲ್ಲದೇ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ:17.11.2025ರಂದು ಸನ್ಮಾನ್ಯ ಪ್ರಧಾನ ಮಂತ್ರಿಗಳನ್ನು ಭೇಟಿಯಾಗಿ ಮನವಿ ಪತ್ರವನ್ನು ನೀಡಿ ಕಬ್ಬು ಬೆಳೆಗಾರರ ಮತ್ತು ಸಕ್ಕರೆ ಕಾರ್ಖಾನೆಗಳ ಬೇಡಿಕೆಗಳ ಕುರಿತು ಚರ್ಚೆ ಮಾಡಿರುತ್ತಾರೆ. ಮೇಲ್ಕಂಡ ಪತ್ರ ಮತ್ತು ಚರ್ಚೆಗಳ ಹಿನ್ನೆಲೆಯಲ್ಲಿ, ಕೇಂದ್ರ ಸರ್ಕಾರವು 2025-26ನೇ ಹಂಗಾಮಿನಲ್ಲಿ ದೇಶದ ಸಕ್ಕರೆ ಕಾರ್ಖಾನೆಗಳು 15.00 ಲಕ್ಷ ಮೆ.ಟನ್ ಸಕ್ಕರೆ ರಫ್ತು ಮಾಡಲು ಅನುಮತಿ ನೀಡಿರುತ್ತದೆ. ಇದರಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳಿಗೆ 2.47 ಲಕ್ಷ ಮೆ.ಟನ್ ಸಕ್ಕರೆ ರಫ್ತು ಮಾಡಲು ಅವಕಾಶ ಕಲ್ಪಿಸಲಾಗಿದೆ. |

**ಸಂಖ್ಯೆ:** ಸಿಐ 368 ಎಸ್‌ಜಿಎಫ್ 2025

**(ಶಿವಾನಂದ ಎಸ್ ಪಾಟೀಲ್)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು

ಅನುಬಂಧ-1

**ಆಯುಕ್ತರು**
ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

**ಕರ್ನಾಟಕ ಸರ್ಕಾರ**

5ನೇ ಮಹಡಿ, ಎಫ್ ಬ್ಲಾಕ್, ಸಿಬಿಎಬಿ ಸಂಕೀರ್ಣ, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009
ದೂರವಾಣಿ: 080-22133390/22133392 ಫ್ಯಾಕ್ಸ್: 08022133391
ಇಮೇಲ್: canecommissioner@gmail.com
ವೆಬ್ ಸೈಟ್: www.canecommissionarate.karnataka.gov.in

ಸಂಖ್ಯೆ: ಡಿಎಸ್‌ಕೆ/ಎಸ್‌ಎಸ್‌ಟಿ/01/2025-26 ದಿನಾಂಕ: 15.09.2025

ರಾಜ್ಯದ ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರು/
ವ್ಯವಸ್ಥಾಪಕ ನಿರ್ದೇಶಕರು/
ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು/
ಪ್ರಧಾನ ವ್ಯವಸ್ಥಾಪಕರುಗಳಿಗೆ.

ಮಾನ್ಯರೆ,

ವಿಷಯ :- 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯ ಆಧಾರದ ಮೇಲೆ 2025-26ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ) ಪ್ರಕಟಣೆಯ ಬಗ್ಗೆ.

ಉಲ್ಲೇಖ :-
1. ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೃಷಿ ಭವನ, ನವದೆಹಲಿ ಇವರ ಪತ್ರ ಸಂ: 3(1)/2024-ಎಸ್‌ಪಿ-I ದಿನಾಂಕ: 06.05.2025
2. ಈ ಕಛೇರಿಯ ಸಮ ಸಂಖ್ಯೆ ಪತ್ರ ದಿನಾಂಕ: 22.08.2025

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ಉಲ್ಲೇಖ (1)ರ ಪತ್ರದಂತೆ 2025-26ನೇ ಸಕ್ಕರೆ ಹಂಗಾಮಿಗೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (ಎಫ್.ಆರ್.ಪಿ) ನಿಗದಿಪಡಿಸಿರುತ್ತದೆ. 2024-25ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವ ರಾಜ್ಯದ ಸಕ್ಕರೆ ಕಾರ್ಖಾನೆಗಳು ಸಲ್ಲಿಸಿರುವ ಅಂತಿಮ ಉತ್ಪಾದನಾ ವರದಿ (RT 8(C)) ಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2025-26ನೇ ಕಬ್ಬು ನುರಿಸುವ ಹಂಗಾಮಿಗೆ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು ಪ್ರಕಟಿಸಲು ಉದ್ದೇಶಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ. 2025-26ನೇ ಹಂಗಾಮಿನಲ್ಲಿ ಪ್ರತಿ

ಮೆ.ಟನ್ ಕಬ್ಬಿಗೆ ಪಾವತಿಸಬೇಕಾದ ಎಫ್.ಆರ್.ಪಿ. ದರವನ್ನು ಕಾರ್ಖಾನೆವಾರು ಲೆಕ್ಕಾಚಾರ ಮಾಡಿ, ಕರಡು ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಈ ಬಗ್ಗೆ ನಿಮ್ಮ ಆಕ್ಷೇಪಣೆಗಳೇನಾದರೂ ಇದ್ದಲ್ಲಿ 10 ದಿನಗಳೊಳಗಾಗಿ ಈ ನಿರ್ದೇಶನಾಲಯಕ್ಕೆ ಸಲ್ಲಿಸಲು ಉಲ್ಲೇಖ (2)ರ ಪತ್ರದಲ್ಲಿ ಸೂಚಿಸಲಾಗಿತ್ತು. ಆದರೆ ಇಲ್ಲಿಯವರೆಗೂ ಕಾರ್ಖಾನೆಗಳ ವತಿಯಿಂದ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ.

ಆದ್ದರಿಂದ ರಾಜ್ಯದ ಸಕ್ಕರೆ ಕಾರ್ಖಾನೆಗಳು 2025-26ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್.ಆರ್.ಪಿ) ಅಂತಿಮ ಆದೇಶವನ್ನು ಹೊರಡಿಸಿದೆ ಹಾಗೂ ಇದರ ಪ್ರತಿಯನ್ನು ಕಾರ್ಖಾನೆಯ ಸೂಚನಾ ಫಲಕದಲ್ಲಿ ಪ್ರಕಟಿಸಿ, ಕಬ್ಬು ಬೆಳೆಗಾರ ರೈತರ ಗಮನಕ್ಕೆ ತರಲು ಸಹ ಸೂಚಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3. ಜಿಲ್ಲಾಧಿಕಾರಿಗಳು, ಬೆಳಗಾವಿ / ಬಾಗಲಕೋಟೆ / ಬೀದರ್ / ಬಳ್ಳಾರಿ / ಹಾವೇರಿ / ಹಾಸನ / ಚಾಮರಾಜನಗರ / ಮೈಸೂರು / ಮಂಡ್ಯ / ವಿಜಯನಗರ / ದಾವಣಗೆರೆ / ಗದಗ / ಕಲಬುರಗಿ / ಉತ್ತರ ಕನ್ನಡ/ ವಿಜಯಪುರ/ ಯಾದಗಿರಿ ಇವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

**ಆಯುಕ್ತರು**
ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

**ಕರ್ನಾಟಕ ಸರ್ಕಾರ**

5ನೇ ಮಹಡಿ, ಎಫ್ ಬ್ಲಾಕ್, ಸಿಬಿಐಪಿ ಸಂಕೀರ್ಣ, ಕೆಹೆಚ್‌ಬಿ ಕಟ್ಟಡ,
ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು- 560 009
ದೂರವಾಣಿ: 080-22133390/22133392 ಫ್ಯಾಕ್ಸ್: 08022133391
ಇಮೇಲ್: canecommissioner@gmail.com
ವೆಬ್ ಸೈಟ್: www.canecommissionarate.karnataka.gov.in

ವಿಷಯ:- 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯ ಆಧಾರದ ಮೇಲೆ 2025-26ನೇ ಸಾಲಿಗೆ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯ ಮತ್ತು ಲಾಭದಾಯಕ ಬೆಲೆ (Fair and Remunerative Price) ಪ್ರಕಟಣೆಯ ಕುರಿತು.

ಉಲ್ಲೇಖ:- ಗ್ರಾಹಕ ವ್ಯವಹಾರ, ಅಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಕೃಷಿ ಭವನ, ನವದೆಹಲಿ ಇವರ ಪತ್ರ, ಸಂ: 3(1)/2024-ಎಸ್‌ಪಿ I ದಿನಾಂಕ 06.05.2025

-*-

**ಪೀಠಿಕೆ:**

ಕೇಂದ್ರ ಸರ್ಕಾರವು ಉಲ್ಲೇಖ ರಂತೆ 2025-26ನೇ ಸಕ್ಕರೆ ಹಂಗಾಮಿಗೆ ಈ ಕೆಳಗಿನಂತೆ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ನಿಗದಿಪಡಿಸಿದೆ.

1. ಶೇಕಡ 10.25 ರಷ್ಟು ಸಕ್ಕರೆ ಇಳುವರಿಗೆ ಪ್ರತಿ ಮೆಟ್ರಿಕ್ ಟನ್ ಕಬ್ಬಿಗೆ ರೂ.3550/-
2. ಶೇಕಡ 10.25 ಕ್ಕೆ ಮೇಲ್ಪಟ್ಟು ಇಳುವರಿಗೆ ನಂತರದ ಶೇಕಡ 1ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್‌ಟನ್‌ಗೆ ರೂ.346/- ರಂತೆ ಹೆಚ್ಚುವರಿ ಬೆಲೆ.
3. ಶೇಕಡ 10.25 ಕ್ಕಿಂತ ಕಡಿಮೆ ಹಾಗೂ ಶೇಕಡ 9.5ಕ್ಕೆ ಮೇಲ್ಪಟ್ಟ ಇಳುವರಿ ಹೊಂದಿರುವ ಸಕ್ಕರೆ ಕಾರ್ಖಾನೆಗಳಿಗೆ ಶೇಕಡ 1 ರಷ್ಟು ಇಳುವರಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.346/-ರ ಸರಾಸರಿಯಂತೆ ನ್ಯಾಯ ಮತ್ತು ಲಾಭದಾಯಕ ಬೆಲೆಯನ್ನು ಕಡಿಮೆ ಮಾಡುವುದು
4. ಶೇಕಡ 9.50 ಅಥವಾ 9.50ಕ್ಕಿಂತ ಕಡಿಮೆ ಇಳುವರಿ ಹೊಂದಿರುವ ಕಾರ್ಖಾನೆಗಳಿಗೆ ಪ್ರತಿ ಮೆಟ್ರಿಕ್ ಟನ್‌ಗೆ ರೂ.3290.5/- ಗಳ ನ್ಯಾಯ ಮತ್ತು ಲಾಭದಾಯಕ ಬೆಲೆ.

2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ಸಲ್ಲಿಸಿದ ಆರ್.ಟಿ 8(ಸಿ) ವರದಿಗಳ ಪ್ರಕಾರ ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯಂತೆ 2025-26ನೇ ಕಬ್ಬು ನುರಿಸುವ ಹಂಗಾಮಿಗೆ ಸದರಿ ಸಕ್ಕರೆ ಕಾರ್ಖಾನೆಗಳು ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ-2014ರ ಕಲಂ 9(1) ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಪ್ರಕಟಿಸಲಾಗಿದೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್‌ದರವಾಗಿರುತ್ತದೆ.

ಈ ಮೇಲಿನ ಅಂಶಗಳ ಹಿನ್ನಲೆಯಲ್ಲಿ ಕಾರ್ಖಾನೆವಾರು ನ್ಯಾಯಯುತ ಮತ್ತು ಲಾಭದಾಯಕ ಬೆಲೆ (Fair and Remunerative Price) ನಿಗದಿಗೊಳಿಸುವ ಸಂಬಂಧ ಈ ಕೆಳಕಂಡ ಆದೇಶ ಹೊರಡಿಸಿದೆ.

# ಆದೇಶ

ಸಂಖ್ಯೆ: ಡಿಎಸ್‌ಕೆ/ಎಸ್‌ಟಿಟಿ/01/2025-26 ದಿನಾಂಕ:15.09.2025

ಕೇಂದ್ರ ಸರ್ಕಾರವು ಉಲ್ಲೇಖ ರಂತೆ 2025-26ನೇ ಸಕ್ಕರೆ ಹಂಗಾಮಿಗೆ ನಿಗದಿಪಡಿಸಿರುವ ನ್ಯಾಯ ಮತ್ತು ಲಾಭದಾಯಕ ದರದ (Fair and Remunerative Price) ಆಧಾರದ ಮೇಲೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) ಅಧಿನಿಯಮ, 2013 ಮತ್ತು (ತಿದ್ದುಪಡಿ) ಅಧಿನಿಯಮ 2014ರ ಕಲಂ 2(ii)(ಇಎ) ಮತ್ತು 9(1) ರನ್ವಯ ದತ್ತವಾದ ಅಧಿಕಾರವನ್ನು ಚಲಾಯಿಸಿ ಎಂ.ಆರ್. ರವಿಕುಮಾರ್, ಭಾ.ಆ.ಸೇ., ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರು, ಬೆಂಗಳೂರು ಆದ ನಾನು 2024-25ನೇ ಸಾಲಿನಲ್ಲಿ ರಾಜ್ಯದ ಸಕ್ಕರೆ ಕಾರ್ಖಾನೆಗಳು ನುರಿಸಿದ ಕಬ್ಬಿನಿಂದ ಉತ್ಪಾದಿಸಲಾದ ಸಕ್ಕರೆ ಇಳುವರಿಯನ್ನು ಆಧಾರವಾಗಿಟ್ಟುಕೊಂಡು 2025-26ನೇ ಸಾಲಿಗೆ ಕರ್ನಾಟಕ ಕಬ್ಬು (ಖರೀದಿ ಮತ್ತು ಸರಬರಾಜು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ 2014ರ ಕಲಂ 9(1)ರ ಪ್ರಕಾರ ಮೊದಲ ಕಂತಿನ ರೂಪದಲ್ಲಿ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯನ್ನು (Fair and Remunerative Price) ಈ ಕೆಳಕಂಡಂತೆ ಅಧಿಕೃತವಾಗಿ ಪ್ರಕಟಿಸಿರುತ್ತೇನೆ. ಈ ಕಬ್ಬಿನ ದರವು ಎಫ್.ಆರ್.ಪಿ. ನಿಯಮದಂತೆ ಎಕ್ಸ್-ಗೇಟ್ ದರವಾಗಿರುತ್ತದೆ. ಈ ಪ್ರಕಟಣೆಯಲ್ಲಿನ ಅಂಕಿ ಅಂಶಗಳು ಕೇಂದ್ರ ಸರ್ಕಾರವು ಕಾರ್ಖಾನೆವಾರು ಹೊರಡಿಸುವ ನ್ಯಾಯಯುತ ಮತ್ತು ಲಾಭದಾಯಕ ಬೆಲೆಯ (Fair and Remunerative Price) ಅಂತಿಮ ಆದೇಶಕ್ಕೆ ಒಳಪಟ್ಟಿರುತ್ತದೆ.

| ಕ್ರ. ಸಂ | ಕಾರ್ಖಾನೆಯ ಹೆಸರು | 2024-25ನೇ ಸಾಲಿನಲ್ಲಿ (01.07.2024 ರಿಂದ 30.06.2025) ರವರೆಗೆ | | | 2025-26ನೇ ಸಾಲಿಗೆ ಪ್ರತಿ ಮೆ.ಟನ್ ಕಬ್ಬಿಗೆ ಪಾವತಿಸಬೇಕಾದ ನ್ಯಾಯಯುತ ಮತ್ತು ಲಾಭದಾಯಕ ಬೆಲೆ (ಎಫ್‌ಆರ್‌ಪಿ) (ರೂ.ಗಳಲ್ಲಿ) |
|---|---|---|---|---|---|
| | | ನುರಿಸಿದ ಕಬ್ಬಿನ ಪ್ರಮಾಣ (ಮೆ. ಟನ್‌ಗಳಲ್ಲಿ) | ಉತ್ಪಾದಿಸಿದ ಸಕ್ಕರೆ ಪ್ರಮಾಣ (ಮೆ.ಟನ್‌ಗಳಲ್ಲಿ) | ಶೇಕಡ ಇಳುವರಿ (%) | |
| | **ಬೆಳಗಾವಿ ಜಿಲ್ಲೆ** | | | | |
| 1 | ಅರಿಹಂತ ಶುಗರ್ಸ್ ಇಂಡಸ್ಟ್ರೀಸ್ ಲಿ., ಜೈನಾಪುರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 301123 | 35443 | 11.77 | 4076 |
| 2 | ಅಥಣಿ ಶುಗರ್ಸ್ ಲಿ., ವಿಷ್ಣುಅಣ್ಣಾನಗರ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 954224 | 94265 | 10.85 | 3758 |
| 3 | ಬೆಳಗಾಂ ಶುಗರ್ಸ್ ಪ್ರೈ ಲಿ, ಹುದಲಿ ಗ್ರಾಮ, ತಾಲ್ಲೂಕು ಮತ್ತು ಜಿಲ್ಲೆ: ಬೆಳಗಾವಿ | 1055053 | 124504 | 11.80 | 4086 |
| 4 | ಚಿದಾನಂದ ಬಸಪ್ರಭು ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ನಿ, ಶಾಂತಪ್ಪನ ಮಿರ್ಜಿ ನಗರ, ತಾಲ್ಲೂಕು: ಚಿಕ್ಕೋಡಿ, ಜಿಲ್ಲೆ: ಬೆಳಗಾವಿ. | 998408 | 78670 | 11.46 | 3969 |

| | | | | | |
|---|---|---|---|---|---|
| 5 | ಇ.ಐ.ಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್, ಖಾನಪೇಟ್, ತಾಲ್ಲೂಕು:ರಾಮದುರ್ಗ, ಜಿಲ್ಲೆ:ಬೆಳಗಾವಿ (ಧನಲಕ್ಷ್ಮಿ ಸಹಕಾರಿ ಸಕ್ಕರೆ ಲಿಮಿಟೆಡ್ ಗುತ್ತಿಗೆದಾರರು) | 535239 | 53199 | 11.93 | 4131 |
| 6 | ದಿ. ಘಟಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಗೋಕಾಕ್, ಜಿಲ್ಲೆ: ಬೆಳಗಾವಿ. | 230547 | 25503 | 11.04 | 3823 |
| 7 | ಗೋಕಾಕ್ ಶುಗರ್ಸ್ ಲಿ., ಕೊಳವಿ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 407455 | 41805 | 11.38 | 3941 |
| 8 | ಶ್ರೀ ಹಾಲಸಿದ್ಧನಾಥ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಶಂಕರಾನಂದ ನಗರ, ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 630458 | 48707 | 11.43 | 3958 |
| 9 | ಹರ್ಷ ಶುಗರ್ಸ್ ಲಿ., ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ. | 627305 | 61748 | 11.22 | 3886 |
| 10 | ಶ್ರೀ ಹಿರಣ್ಯಕೇಶಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಸಂಕೇಶ್ವರ, ಜಿಲ್ಲೆ: ಬೆಳಗಾವಿ. | 520847 | 48050 | 10.82 | 3747 |
| 11 | ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ (ನಿ), ಪೋಸ್ಟ್:ಸಂಕೋನಟ್ಟಿ, ತಾಲ್ಲೂಕು:ಅಥಣಿ, ಜಿಲ್ಲೆ: ಬೆಳಗಾವಿ | 436082 | 48200 | 11.05 | 3827 |
| 12 | ಲೈಲಾ ಶುಗರ್ಸ್ ಪ್ರೈ ಲಿ., (ಶ್ರೀ ಭಾಗ್ಯಲಕ್ಷ್ಮಿ ಸಹಕಾರಿ ಸಕ್ಕರೆ ಗುತ್ತಿಗೆದಾರರು), ಖಾನಾಪುರ, ಜಿಲ್ಲೆ ಬೆಳಗಾವಿ | 174586 | 19284 | 11.05 | 3827 |
| 13 | ಶ್ರೀ ಮಲಪ್ರಭಾ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಎಂ.ಕೆ. ಹುಬ್ಬಳ್ಳಿ, ಜಿಲ್ಲೆ: ಬೆಳಗಾವಿ | 162276 | 18016 | 11.10 | 3844 |
| 14 | ಶ್ರೀ ರೇಣುಕಾ ಶುಗರ್ಸ್ ಲಿ., ಯುನಿಟ್-III, ಭಾವಚಿ, ಪೋಸ್ಟ್: ಮೆಕ್ಕಳ್ಳಿ, ತಾಲ್ಲೂಕು: ರಾಯಬಾಗ್, ಜಿಲ್ಲೆ: ಬೆಳಗಾವಿ. | 284919 | 26705 | 10.72 | 3713 |
| 15 | ಶ್ರೀ ರೇಣುಕಾ ಶುಗರ್ಸ್ ಲಿ. ಯುನಿಟ್-4 ಬುರ್ಲಟ್ಟಿ ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 991915 | 33538 | 11.02 | 3816 |
| 16 | ಶ್ರೀ ರೇಣುಕಾ ಶುಗರ್ಸ್ ಲಿ. ಯುನಿಟ್-1 ಮುನೋಳಿ, ತಾಲ್ಲೂಕು: ಸವದತ್ತಿ, ಜಿಲ್ಲೆ: ಬೆಳಗಾವಿ | 901576 | 28830 | 11.55 | 4000 |

| | | | | | |
|---|---|---|---|---|---|
| 17 | ಸತೀಶ್ ಶುಗರ್ಸ್ ಲಿ., ಹುಣಶ್ಯಾಳ್ ಗ್ರಾಮ, ತಾಲ್ಲೂಕು: ಗೋಕಾಕ್, ಜಿಲ್ಲೆ: ಬೆಳಗಾವಿ. | 1211611 | 80846 | 11.65 | 4034 |
| 18 | ಶ್ರೀ ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಹಿಡಕಲ್‌ಡ್ಯಾಂ, ತಾಲ್ಲೂಕು:ಹುಕ್ಕೇರಿ, ಜಿಲ್ಲೆ: ಬೆಳಗಾವಿ | 214045 | 25888 | 12.10 | 4188 |
| 19 | ಶಿರಗುಪ್ಪಿ ಶುಗರ್ ವರ್ಕ್ಸ್ ಲಿ., ತಾಲ್ಲೂಕು: ಕಾಗವಾಡ, ಜಿಲ್ಲೆ: ಬೆಳಗಾವಿ | 831528 | 64970 | 11.96 | 4142 |
| 20 | ಶಿವಶಕ್ತಿ ಶುಗರ್ಸ್ ಲಿಮಿಟೆಡ್, ಸವದತ್ತಿ ತಾಲ್ಲೂಕು:ರಾಯಬಾಗ, ಜಿಲ್ಲೆ:ಬೆಳಗಾವಿ | 1822550 | 123951 | 11.08 | 3837 |
| 21 | ಶ್ರೀ ಶಿವಸಾಗರ ಶುಗರ್ ಅಂಡ್ ಅಗ್ರೋ ಪ್ರಾಡಕ್ಟ್ ಲಿಮಿಟೆಡ್ (ಗುಡಗುಂಟಿ ಶುಗರ್ಸ್ ಅಂಡ್ ಬಯೋಎನರ್ಜಿ ಲಿಮಿಟೆಡ್ ಇದರ ಅಂಗಸಂಸ್ಥೆ), ಉದುಪುಡಿ ಗ್ರಾಮ, ತಾಲ್ಲೂಕು: ರಾಮದುರ್ಗ, ಜಿಲ್ಲೆ: ಬೆಳಗಾವಿ | 404736 | 38620 | 10.90 | 3775 |
| 22 | ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ, ಜಿಲ್ಲೆ: ಬೆಳಗಾವಿ | 206173 | 25844 | 12.53 | 4339 |
| 23 | ಸೌಭಾಗ್ಯಲಕ್ಷ್ಮಿ ಶುಗರ್ಸ್, ಹಿರೇನಂದಿ ಗ್ರಾಮ, ತಾಲ್ಲೂಕು:ಗೋಕಾಕ್, ಜಿಲ್ಲೆ: ಬೆಳಗಾವಿ | 346248 | 36040 | 10.42 | 3609 |
| 24 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಟ್, ಬಳ್ಳಿಗೇರಿ, ತಾಲ್ಲೂಕು: ಅಥಣಿ, ಜಿಲ್ಲೆ: ಬೆಳಗಾವಿ | 89345 | 524 | 11.07 | 3834 |
| 25 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ಪೋಸ್ಟ್: ಉಗಾರ್‌ಖುರ್ದ್, ಜಿಲ್ಲೆ: ಬೆಳಗಾವಿ | 1628950 | 97272 | 10.75 | 3723 |
| 26 | ವೆಂಕಟೇಶ್ವರ ಪವರ್ ಪ್ರಾಜೆಕ್ಟ್ ಲಿ., ಪೋಸ್ಟ್: ಬೇಡಕಿಹಾಲ, ತಾಲ್ಲೂಕು: ನಿಪ್ಪಾಣಿ, ಜಿಲ್ಲೆ: ಬೆಳಗಾವಿ. | 1125512 | 135074 | 12.00 | 4156 |
| 27 | ವಿಶ್ವರಾಜ್ ಶುಗರ್ಸ್ ಲಿಮಿಟೆಡ್,, ಬೆಲ್ಲದ-ಬಾಗೇವಾಡಿ, ತಾಲ್ಲೂಕು: ಹುಕ್ಕೇರಿ, ಜಿಲ್ಲೆ: ಬೆಳಗಾವಿ | 744743 | 55290 | 11.54 | 3996 |
| 28 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಅಲಗವಾಡಿ ಬೀರೇಶ್ವರ ಶುಗರ್ಸ್ ಅಲಗವಾಡಿ ಗ್ರಾಮ, ತಾಲ್ಲೂಕು : ರಾಯಬಾಗ, ಜಿಲ್ಲೆ: ಬೆಳಗಾವಿ | 1209049 | 109200 | 10.41 | 3605 |

Commissioner for Cane Development Director of Sugar & ... BANGALORE.

| | | | | | |
|---|---|---|---|---|---|
| 29 | ಇನಾಂದಾರ್ ಶುಗರ್ಸ್ ಲಿಮಿಟೆಡ್, ಹಿರೇಕೊಪ್ಪ ಮಾರಕುಂಬಿ ತಾಲ್ಲೂಕು:ಸವದತ್ತಿ, ಜಿಲ್ಲೆ: ಬೆಳಗಾವಿ | 367512 | 36025 | 11.46 | 3969 |
| | **ಬಾಗಲಕೋಟೆ ಜಿಲ್ಲೆ.** | | | | |
| 30 | ನಿರಾಣಿ ಶುಗರ್ಸ್ ಲಿಮಿಟೆಡ್ ಯುನಿಟ್-5, ಮಸ್ತಿಗೇರಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 210419 | 19088 | 10.98 | 3803 |
| 31 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ತಾಲ್ಲೂಕು: ಬೀಳಗಿ,ಜಿಲ್ಲೆ: ಬಾಗಲಕೋಟೆ | 910214 | 66786 | 10.42 | 3609 |
| 32 | ಇಐಡಿ ಪ್ಯಾರಿ (ಇಂಡಿಯಾ) ಲಿಮಿಟೆಡ್, ನಾಗರಾಳ, ನೈನಿಗಲಿ, ಬಾಗಲಕೋಟೆ ತಾಲ್ಲೂಕು, & ಜಿಲ್ಲೆ | 634650 | 55350 | 11.87 | 4111 |
| 33 | ಜೆಮ್ ಶುಗರ್ಸ್ ಲಿ., ಕುಂದರಗಿ, ಬೀಳಗಿ, ಜಿಲ್ಲೆ:ಬಾಗಲಕೋಟೆ. | 602726 | 49704 | 10.85 | 3758 |
| 34 | ಗೋದಾವರಿ ಬಯೋರಿಫೈನರೀಸ್ ಲಿ., ಸಮೀರವಾಡಿ, ಜಿಲ್ಲೆ:ಬಾಗಲಕೋಟೆ | 2465899 | 151497 | 10.91 | 3778 |
| 35 | ಇಂಡಿಯನ್ ಕೇನ್ ಪವರ್ ಲಿ, ಉತ್ತೂರು, ಮುಧೋಳ್, ಬಾಗಲಕೋಟೆ ಜಿಲ್ಲೆ | 2301515 | 228000 | 10.73 | 3716 |
| 36 | ಜಮಖಂಡಿ ಶುಗರ್ಸ್ ಲಿಮಿಟೆಡ್, ಹಿರೇಪಡಸಲಗಿ, ನಾಗನೂರು ಪೋಸ್ಟ್, ತಾಲ್ಲೂಕು: ಜಮಖಂಡಿ, ಜಿಲ್ಲೆ: ಬಾಗಲಕೋಟೆ | 876589 | 58044 | 10.78 | 3733 |
| 37 | ಮೆಲ್ಟ್ರೊ ಶುಗರ್ಸ್ ಲಿಮಿಟೆಡ್, ಶಿರೂರು. ತಾಲ್ಲೂಕು ಮತ್ತು ಜಿಲ್ಲೆ:ಬಾಗಲಕೋಟೆ | 616981 | 55800 | 10.57 | 3661 |
| 38 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-[illegible], ಕಲ್ಲಾಪುರ ಎಸ್.ಕೆ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 705899 | 38407 | 11.00 | 3810 |
| 39 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-1, ಕುಳಲಿ ಕ್ರಾಸ್, ಮುಧೋಳ ತಾಲ್ಲೂಕು: ಮುಧೋಳ ಜಿಲ್ಲೆ: ಬಾಗಲಕೋಟೆ | 2008702 | 124355 | 10.90 | 3775 |
| 40 | ಶ್ರೀ ಪ್ರಭುಲಿಂಗೇಶ್ವರ ಶುಗರ್ಸ್ & ಕೆಮಿಕಲ್ಸ್ ಲಿ., ತಾಲ್ಲೂಕು:ಜಮಖಂಡಿ, ಜಿಲ್ಲೆ: ಬಾಗಲಕೋಟೆ | 1761151 | 149430 | 10.74 | 3720 |

| | | | | | |
|---|---|---|---|---|---|
| 41 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-4, ಕೆರಕಲಮಟ್ಟಿ, ತಾಲ್ಲೂಕು: ಬಾದಾಮಿ, ಜಿಲ್ಲೆ: ಬಾಗಲಕೋಟೆ | 482473 | 44296 | 10.88 | 3768 |
| 42 | ನಿರಾಣಿ ಶುಗರ್ಸ್ ಲಿಮಿಟೆಡ್, ಯುನಿಟ್-2, ಹಿಪ್ಪರಗಿ-ಮೈಗೂರ, ತಾಲ್ಲೂಕು:ಜಮಖಂಡಿ ಜಿಲ್ಲೆ: ಬಾಗಲಕೋಟೆ | 1689224 | 114710 | 10.92 | 3782 |
| 43 | ಬೀಳಗಿ ಶುಗರ್ ಮಿಲ್ ಲಿಮಿಟೆಡ್, ಯುನಿಟ್-2, (ರೈತರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು) ರನ್ನಾನಗರ, ತಿಮ್ಮಾಪೂರ, ತಾಲ್ಲೂಕು: ಮುಧೋಳ್, ಜಿಲ್ಲೆ: ಬಾಗಲಕೋಟೆ<br>**ಷರಾ:**<br>**ಕಾರ್ಖಾನೆ ಕಳೆದ 2024-25ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವುದಿಲ್ಲ. ಆದ್ದರಿಂದ 2022-23 ರಲ್ಲಿನ ಅಂಕಿ-ಅಂಶಗಳನ್ನು ಪರಿಗಣಿಸಿ ದರ ನಿಗದಿಗೊಳಿಸಿದೆ.** | 402085 | 44315 | 11.02 | 3816 |
| | **ಬಳ್ಳಾರಿ ಜಿಲ್ಲೆ.** | | | | |
| 44 | ಎನ್ಎಸ್ಎಲ್ ಶುಗರ್ಸ್ (ತುಂಗಾಭದ್ರಾ) ಲಿಮಿಟೆಡ್., ದೇಶನೂರು, ತಾಲ್ಲೂಕು: ಶಿರಗುಪ್ಪ ಜಿಲ್ಲೆ: ಬಳ್ಳಾರಿ. | 193270 | 17669 | 9.20 | 3291 |
| | **ಬೀದರ್ ಜಿಲ್ಲೆ.** | | | | |
| 45 | ಭಾಲ್ಕೇಶ್ವರ ಶುಗರ್ಸ್ ಲಿ. ಮಡಕಟ್ಟಿ ಕ್ರಾಸ್, ಬಾಜೋಳಗ, ತಾಲ್ಲೂಕು: ಭಾಲ್ಕಿ ಜಿಲ್ಲೆ: ಬೀದರ್ | 272291 | 15670 | 9.51 | 3294 |
| 46 | ಬೀದರ್ ಕಿಸಾನ್ ಸಕ್ಕರೆ ಕಾರ್ಖಾನೆ ಲಿ., ಮೊಗದಾಲ್ ಗ್ರಾಮ, ಪೋಸ್ಟ್: ಮರಕುಂದಾ, ತಾಲ್ಲೂಕು ಮತ್ತು ಜಿಲ್ಲೆ (ಬೀದರ್) | 444242 | 45312 | 10.20 | 3533 |
| 47 | ದಿ ಮಹಾತ್ಮಗಾಂಧಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಭಾಲ್ಕಿ ಜಿಲ್ಲೆ:ಬೀದರ್ | 397454 | 39140 | 9.85 | 3412 |
| 48 | ನಾರಂಜ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಇಮಾಮಪುರ ಗ್ರಾಮ, (ಜನವಾಡ ಹತ್ತಿರ) ತಾಲ್ಲೂಕು & ಜಿಲ್ಲೆ : ಬೀದರ್ | 301993 | 29435 | 9.75 | 3377 |

| | | | | | |
|---|---|---|---|---|---|
| 49 | ಶ್ರೀ ಭವಾನಿ ಖಂಡಸಾರಿ ಶುರ್ಸ್ ಲಿ, ಬರೂರು ಗ್ರಾಮ, ತಾಲ್ಲೂಕು & ಜಿಲ್ಲೆ: ಬೀದರ್. | 173984 | 15111 | 8.69 | 3291 |
| | **ಚಾಮರಾಜನಗರ ಜಿಲ್ಲೆ** | | | | |
| 50 | ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಯುನಿಟ್-III, ಕುಂತೂರು ಗ್ರಾಮ, ತಾಲ್ಲೂಕು: ಕೊಳ್ಳೇಗಾಲ, ಜಿಲ್ಲೆ: ಚಾಮರಾಜನಗರ. | 589111 | 52918 | 8.95 | 3291 |
| | **ದಾವಣಗೆರೆ ಜಿಲ್ಲೆ** | | | | |
| 51 | ದಾವಣಗೆರೆ ಶುಗರ್ಸ್ ಲಿ., ಕುಕ್ಕುವಾಡ, ತಾಲ್ಲೂಕು & ಜಿಲ್ಲೆ :ದಾವಣಗೆರೆ | 182242 | 13261 | 8.87 | 3291 |
| | **ಗದಗ ಜಿಲ್ಲೆ.** | | | | |
| 52 | ವಿಜಯನಗರ ಶುಗರ್ಸ್ ಪ್ರೈ ಲಿಮಿಟೆಡ್, (ಮೃದಗಿರಿ ಸಹಕಾರಿ ಸಕ್ಕರೆ ಕಾರ್ಖಾನೆ ಲಿಮಿಟೆಡ್ ನಿ., ಗುತ್ತಿಗೆದಾರರು), ಗಂಗಾಪುರ ಗ್ರಾಮ ತಾಲ್ಲೂಕು: ಮುಂಡರಗಿ, ಜಿಲ್ಲೆ: ಗದಗ. | 378707 | 32011 | 9.61 | 3329 |
| | **ಹಾಸನ ಜಿಲ್ಲೆ** | | | | |
| 53 | ಚಾಮುಂಡೇಶ್ವರಿ ಶುಗರ್ಸ್ ಲಿ., (ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ಶ್ರೀನಿವಾಸಪುರ, ತಾಲ್ಲೂಕು: ಚನ್ನರಾಯಪಟ್ಟಣ ಜಿಲ್ಲೆ:ಹಾಸನ | 413707 | 38433 | 9.29 | 3291 |
| | **ಹಾವೇರಿ ಜಿಲ್ಲೆ.** | | | | |
| 54 | ಜಿಎಂ ಶುಗರ್ ಅಂಡ್ ಎನರ್ಜಿ ಲಿ.(ಗುತ್ತಿಗೆದಾರರು ಕರ್ನಾಟಕ ಸಹಕಾರಿ ಸಕ್ಕರೆ ಕಾರ್ಖಾನೆ ನಿ.) ಸಂಗೂರು, ತಾಲ್ಲೂಕು ಮತ್ತು ಜಿಲ್ಲೆ: ಹಾವೇರಿ. | 199826 | 18794 | 9.40 | 3291 |
| 55 | ಜಿಎಂ ಶುಗರ್ ಅಂಡ್ ಎನರ್ಜಿ ಲಿ., ಯುನಿಟ್-2, ಚಟ್ಟಹಳ್ಳಿ ಗ್ರಾಮ, ತಾಲ್ಲೂಕು: ರಟ್ಟಿ ಹಳ್ಳಿ, ಜಿಲ್ಲೆ: ಹಾವೇರಿ | 302587 | 0 | 9.46 | 3291 |
| 56 | ವಿ.ಐ.ಎಸ್.ಪಿ ಡಿಸ್ಟಲರೀಸ್ & ಶುಗರ್ಸ್ ಪ್ರೈ ಲಿ., ಕೋಣನಕೆರೆ ಗ್ರಾಮ, ಶಿಗ್ಗಾಂವ್ ತಾಲ್ಲೂಕು, ಜಿಲ್ಲೆ: ಹಾವೇರಿ | 365700 | 9019 | 9.51 | 3291 |

Commissioner for Cane Development & Director of Sugar ... BANGALORE

| | | | | | |
|---|---|---|---|---|---|
| | **ಕಲಬುರಗಿ ಜಿಲ್ಲೆ.** | | | | |
| 57 | ಕೆಪಿಆರ್ ಶುಗರ್ & ಅಪ್ಪರೆಲ್ಸ್ ಲಿ., ಚಿನ್ನಮ್ಮಗೆರಿ ಗ್ರಾಮ, ಚೌಡಾಪುರ, ತಾಲ್ಲೂಕು: ಅಫಜಲಪುರ, ಜಿಲ್ಲೆ: ಕಲಬುರಗಿ | 1112757 | 70000 | 10.14 | 3512 |
| 58 | ಎನ್ಎಸ್ಎಲ್ ಶುಗರ್ಸ್ (ಆಳಂದ ಸಹಕಾರಿ ಸಕ್ಕರೆ ಕಾರ್ಖಾನೆ ಗುತ್ತಿಗೆದಾರರು) ಭೂಸನೂರ್, ತಾಲ್ಲೂಕು: ಆಳಂದ, ಜಿಲ್ಲೆ: ಕಲಬುರಗಿ | 727386 | 738941 | 10.15 | 3515 |
| 59 | ಶ್ರೀ ರೇಣುಕಾ ಶುಗರ್ಸ್ ಲಿಮಿಟೆಡ್, ಯುನಿಟ್-5, ಹವಳಗಾ ಗ್ರಾಮ, ತಾಲ್ಲೂಕು: ಅಫ್‌ಜಲಪುರ, ಜಿಲ್ಲೆ: ಕಲಬುರಗಿ. | 704687 | 30725 | 9.60 | 3325 |
| 60 | ದಿ ಉಗಾರ್ ಶುಗರ್ ವರ್ಕ್ಸ್ ಲಿ, ನಾಗರಹಳ್ಳಿ, ಮಲ್ಲಿ, ತಾಲ್ಲೂಕು:ಜೇವರ್ಗಿ, ಜಿಲ್ಲೆ: ಕಲಬುರಗಿ | 351689 | 31135 | 8.80 | 3291 |
| 61 | ಸಿದ್ದಸಿರಿ ಸೌಹಾರ್ದ ಸಹಕಾರಿ ನಿ., ಚಿಂಚೋಲಿ, ತಾಲ್ಲೂಕು: ಚಿಂಚೋಲಿ, ಜಿಲ್ಲೆ: ಕಲಬುರಗಿ<br>**ಷರಾ:**<br>**ಕಾರ್ಖಾನೆ ಕಳೆದ 2024-25ನೇ ಸಾಲಿನಲ್ಲಿ ಕಾರ್ಯ ನಿರ್ವಹಿಸಿರುವುದಿಲ್ಲ. ಆದ್ದರಿಂದ 2023-24 ರಲ್ಲಿನ ಅಂಕಿ-ಅಂಶಗಳನ್ನು ಪರಿಗಣಿಸಿ ದರ ನಿಗದಿಗೊಳಿಸಿದೆ.** | 253351 | 0 | 10.16 | 3519 |
| | **ಮಂಡ್ಯ ಜಿಲ್ಲೆ** | | | | |
| 62 | ಕೋರಮಂಡಲ್ ಶುಗರ್ಸ್ ಲಿ., ಮಾಕವಳ್ಳಿ, ತಾಲ್ಲೂಕು: ಕೆ.ಆರ್.ಪೇಟೆ, ಜಿಲ್ಲೆ: ಮಂಡ್ಯ | 484880 | 44100 | 9.10 | 3291 |
| 63 | ಮೈಸೂರು ಸಕ್ಕರೆ ಕಂಪನಿ ನಿ., ಸಕ್ಕರೆ ನಗರ, ಜಿಲ್ಲೆ: ಮಂಡ್ಯ | 199888 | 12685 | 6.35 | 3291 |
| 64 | ಎಂ.ಆರ್.ಎನ್ ಕೇನ್ ಪವರ್ ಅಂಡ್ ಬಯೋರಿಫೈನರೀಸ್ ಪ್ರೈ ಲಿ. (ಪಾಂಡವಪುರ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆದಾರರು), ತಾಲ್ಲೂಕು: ಪಾಂಡವಪುರ, ಜಿಲ್ಲೆ: ಮಂಡ್ಯ | 613354 | 54940 | 8.90 | 3291 |

| | | | | | |
|---|---|---|---|---|---|
| 65 | ಎನ್.ಎಸ್.ಎಲ್ ಶುಗರ್ಸ್ ಲಿ.<br>ಕೊಪ್ಪ ತಾಲ್ಲೂಕು: ಮದ್ದೂರು.<br>ಜಿಲ್ಲೆ:ಮಂಡ್ಯ | 622918 | 56134 | 9.00 | 3291 |
| 66 | ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ.,<br>ಭಾರತಿ ನಗರ, ತಾಲ್ಲೂಕು: ಮದ್ದೂರು,<br>ಜಿಲ್ಲೆ:ಮಂಡ್ಯ | 766956 | 70781 | 9.22 | 3291 |
| | **ಮೈಸೂರು ಜಿಲ್ಲೆ** | | | | |
| 67 | ಬನ್ನಾರಿ ಅಮ್ಮನ್ ಶುಗರ್ಸ ಲಿ.,<br>ಅಲಗ ಗ್ರಾಮ, ತಾಲ್ಲೂಕು:<br>ನಂಜನಗೂಡು, ಜಿಲ್ಲೆ: ಮೈಸೂರು | 1006892 | 91016 | 9.03 | 3291 |
| | **ಉತ್ತರ ಕನ್ನಡ ಜಿಲ್ಲೆ.** | | | | |
| 68 | ಇಐಡಿ ಪ್ಯಾರಿ (ಇಂಡಿಯಾ) ಲಿ., ಹುಲ್ಲಟ್ಟಿ<br>ಗ್ರಾಮ, ಹಲಿಯಾಳ,<br>ಜಿಲ್ಲೆ: ಉತ್ತರ ಕನ್ನಡ | 986808 | 103019 | 11.55 | 4000 |
| | **ವಿಜಯಪುರ ಜಿಲ್ಲೆ.** | | | | |
| 69 | ಶ್ರೀ ದತ್ ಇಂಡಿಯಾ ಪ್ರೈ ಲಿ.,<br>ಹಾವಿನಾಳ್, ತಾಲ್ಲೂಕು: ಚಡಚಣ,<br>ಜಿಲ್ಲೆ: ವಿಜಯಪುರ. | 392180 | 34752 | 10.38 | 3594 |
| 70 | ಜಮಖಂಡಿ ಶುಗರ್ಸ್ ಲಿಮಿಟೆಡ್,<br>ಘಟಕ-2, ನಾದ್‌ಕೆಡಿ, ತಾಲ್ಲೂಕು: ಇಂಡಿ,<br>ಜಿಲ್ಲೆ: ವಿಜಯಪುರ | 306467 | 29593 | 9.66 | 3346 |
| 71 | ಕೆಪಿಆರ್ ಶುಗರ್ ಮಿಲ್ ಲಿ.,<br>ಆಲಮೇಲ ಗ್ರಾಮ,<br>ತಾಲ್ಲೂಕು: ಸಿಂದಗಿ, ಜಿಲ್ಲೆ: ವಿಜಯಪುರ. | 1018793 | 54850 | 9.44 | 3291 |
| 72 | ಶ್ರೀ ಸ್ವಾಮಿಬಸವ ಶುಗರ್ಸ್ ಲಿಮಿಟೆಡ್,<br>ಪೋಸ್ಟ್: ಮಲಘಾಣ, ತಾಲ್ಲೂಕು:<br>ಅಲುಮೇಲು, ಜಿಲ್ಲೆ: ವಿಜಯಪುರ | 264457 | 23432 | 8.86 | 3291 |
| 73 | ನಂದಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ.,<br>ಕೃಷ್ಣಾನಗರ, ಪೋಸ್ಟ್: ಹೊಸೂರು,<br>ತಾಲ್ಲೂಕು: ಬಬಲೇಶ್ವರ,<br>ಜಿಲ್ಲೆ : ವಿಜಯಪುರ. | 427676 | 47221 | 11.00 | 3810 |
| 74 | ಸಂಗಮನಾಥ ಶುಗರ್ಸ್ ಲಿಮಿಟೆಡ್,<br>ಯರಗಲ್ ಬಿ.ಕೆ. ತಾಲ್ಲೂಕು: ಸಿಂದಗಿ,<br>ಜಿಲ್ಲೆ: ವಿಜಯಪುರ | 509674 | 40103 | 9.43 | 3291 |
| 75 | ಶ್ರೀ ಬಾಲಾಜಿ ಶುಗರ್ಸ್ & ಕೆಮಿಕಲ್ಸ್<br>ಪ್ರೈ ಲಿಮಿಟೆಡ್, ಯರಗಲ ತಾಲ್ಲೂಕು:<br>ಮುದ್ದೇಬಿಹಾಳ, ಜಿಲ್ಲೆ: ವಿಜಯಪುರ | 810728 | 65593 | 10.89 | 3771 |

| | | | | | |
|---|---|---|---|---|---|
| 76 | ಶ್ರೀ ಬಸವೇಶ್ವರ ಶುಗರ್ಸ್ ಲಿಮಿಟೆಡ್, ಕಾರಜೋಳ ಗ್ರಾಮ, ತಾಲ್ಲೂಕು: ಬಬಲೇಶ್ವರ, ಜಿಲ್ಲೆ: ವಿಜಯಪುರ | 518608 | 48867 | 10.90 | 3775 |
| 77 | ಶ್ರೀ ಭೀಮಾಶಂಕರ್ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಮರಗೂರ, ತಾಲ್ಲೂಕು:ಇಂಡಿ, ಜಿಲ್ಲೆ: ವಿಜಯಪುರ. | 327452 | 30028 | 9.17 | 3291 |
| 78 | ಇಂಡಿಯನ್ ಕೇನ್ ಪವರ್ ಲಿ. ಘಟಕ: ಡಿಎಸ್‌ಎಸ್‌ಎಸ್‌ಎಸ್, ಹಿರೇಬೇಮನೂರು ಗ್ರಾಮ, ತಾಲ್ಲೂಕು: ಇಂಡಿ ,ಜಿಲ್ಲೆ: ವಿಜಯಪುರ | 171126 | 16873 | 9.86 | 3415 |
| | **ವಿಜಯನಗರ ಜಿಲ್ಲೆ** | | | | |
| 79 | ಮೈಲಾರ ಶುಗರ್ಸ್ ಲಿ., ಬೀರಬ್ಬಿ, ತಾಲ್ಲೂಕು: ಹೂವಿನಹಡಗಲಿ, ಜಿಲ್ಲೆ: ವಿಜಯನಗರ | 444614 | 19211 | 9.37 | 3291 |
| 80 | ಶ್ಯಾಮನೂರು ಶುಗರ್ಸ್ ಲಿ., ದುಗ್ಗಾವತಿ, ತಾಲ್ಲೂಕು: ಹರಪನಹಳ್ಳಿ, ಜಿಲ್ಲೆ:ವಿಜಯನಗರ | 142501 | 6347 | 8.40 | 3291 |
| | **ಯಾದಗಿರಿ ಜಿಲ್ಲೆ** | | | | |
| 81 | ಕೋರ್‌ಗ್ರೀನ್ ಶುಗರ್ & ಫ್ಯುಯಲ್ಸ್ ಪ್ರೈ ಲಿಮಿಟೆಡ್. ತುಮಕೂರು ಗ್ರಾಮ, ತಾಲ್ಲೂಕು:ವಡೇಗೆರ, ಜಿಲ್ಲೆ: ಯಾದಗಿರಿ | 359523 | 30782 | 9.92 | 3436 |

ಈ ಆದೇಶವನ್ನು ನನ್ನ ಹಸ್ತಾಕ್ಷರ ಮತ್ತು ಕಛೇರಿ ಮೊಹರಿನೊಂದಿಗೆ ದಿನಾಂಕ 15.09.2025 ರಂದು ಹೊರಡಿಸುತ್ತೇನೆ.

Commissioner for Cane Development Director of Sugar & Addl. Registrar Co-op. Societies in Karnataka (Ex-officio) BANGALORE

ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ
ಸಕ್ಕರೆ ನಿರ್ದೇಶಕರು

ಇವರಿಗೆ:
ರಾಜ್ಯದ ಸಕ್ಕರೆ ಕಾರ್ಖಾನೆಗಳ ಅಧ್ಯಕ್ಷರು/ ವ್ಯವಸ್ಥಾಪಕ ನಿರ್ದೇಶಕರು/ ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳು/ ಪ್ರಧಾನ ವ್ಯವಸ್ಥಾಪಕರುಗಳು.

**ಪ್ರತಿಯನ್ನು:**

1. ಸರ್ಕಾರದ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

2. ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಮತ್ತು ಕೃಷಿ ಮಾರುಕಟ್ಟೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.

3. ಜಿಲ್ಲಾಧಿಕಾರಿಗಳು/ ಉಪ ವಿಭಾಗಾಧಿಕಾರಿಗಳು/ ತಹಸಿಲ್ದಾರ್‌ಗಳು/ ಜಂಟಿ ಕೃಷಿ ನಿರ್ದೇಶಕರು/ ಉಪ ಕೃಷಿ ನಿರ್ದೇಶಕರು/ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು/ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ ಬೆಳಗಾವಿ / ಬಾಗಲಕೋಟೆ / ಬೀದರ್ / ಬಳ್ಳಾರಿ / ಹಾವೇರಿ / ಹಾಸನ / ಚಾಮರಾಜನಗರ / ಮೈಸೂರು / ಮಂಡ್ಯ / ವಿಜಯನಗರ / ದಾವಣಗೆರೆ/ ಗದಗ / ಕಲಬುರಗಿ / ಉತ್ತರ ಕನ್ನಡ / ವಿಜಯಪುರ / ಯಾದಗಿರಿ ಇವರುಗಳಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.